1	2	3	4	5	6
198.	Improvements to Sirsi Sonaginamane in Sirsi Tq. Zilla Main road Km 0.00 to 12.00 Km)	MDR	12.00	50.00	Uttara Kannada
	Grand Total		**1822.9816408.44**		

ಮಾಹಿತಿ ತಂತ್ರಜ್ಞಾನಕ್ಕೆ ತೊಡಗಿಸಲಾದ ಬಂಡವಾಳ

2230 (2384) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ): ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ ಪಡಿಸುವ ಸಲುವಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಆ) ಈ ತಂತ್ರಜ್ಞಾನದಿಂದ ಸಂಪೂರ್ಣ ಲಾಭವನ್ನು ಪಡೆಯುತ್ತಿರುವ ಕ್ಷೇತ್ರಗಳಾವುವು;

ಇ) ಮಾಹಿತಿ ತಂತ್ರಜ್ಞಾನ ಕೇಂದ್ರಗಳನ್ನು ತಾಲ್ಲೂಕು ಮತ್ತು ಹೋಬಳಿ ಕೇಂದ್ರಗಳಲ್ಲಿ ಸ್ಥಾಪಿಸಲು ನಿರ್ಧರಿಸಲಾಗಿದೆಯೆ;

ಈ) ಮಾಹಿತಿ ತಂತ್ರಜ್ಞಾನ ಕ್ಷೇತ್ರಕ್ಕೆ ತೊಡಗಿಸಲಾಗಿರುವ ಬಂಡವಾಳ ಎಷ್ಟು;

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಅಭಿವೃದ್ಧಿಗಾಗಿ ಸರ್ಕಾರವು ಸಹಸ್ರಮಾನದ ಮಾಹಿತಿ ತಂತ್ರಜ್ಞಾನ ನೀತಿಯನ್ನು ಜಾರಿಗೆ ತಂದಿದ್ದು, ಆ ಮೂಲಕ ಈ ಕೆಳಕಂಡಂತೆ ಕಾರ್ಯವನ್ನು ಕೈಗೊಂಡಿರುತ್ತದೆ.

1) ಸಾಫ್ಟ್ ವೇರ್ ಟೆಕ್ನಾಲಜಿ ಪಾರ್ಕ್‌ಗಳ ಸ್ಥಾಪನೆಗೆ ಉತ್ತೇಜನ ನೀಡುವುದು.

2) ರಾಜ್ಯದಾದ್ಯಂತ ವಿಶಾಲ ಬ್ಯಾಂಡ್ ವಿಡ್ತ್ ಸೌಲಭ್ಯದ ಸಂಪರ್ಕ ಜಾಲವನ್ನು ಒಎಫ್‌ಸಿ ಮೂಲಕ ಹರಡಲು ಅನುಕೂಲಕರ ವಾತಾವರಣದ ನಿರ್ಮಾಣ ಮತ್ತು ಉತ್ತೇಜನ ನೀಡುವುದು.

3) ಸರಳೀಕೃತ ಕಾರ್ಮಿಕ ನೀತಿಯನ್ನು ಜಾರಿಗೆ ತರಲಾಗಿದೆ.

4) ಐಟಿ ಕಂಪನಿಗಳಿಗೆ ಅಂತರ ರಾಷ್ಟ್ರೀಯ ಮಟ್ಟದ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಐಟಿ ಕಾರಿಡಾರನ್ನು ಸ್ಥಾಪಿಸುವುದು.

5) ಉನ್ನತ ಮಟ್ಟದ ಮಾನವ ಸಂಪನ್ಮೂಲವನ್ನು ಸೃಷ್ಟಿಸಲು ಅಂತರ ರಾಷ್ಟ್ರೀಯ ಮಟ್ಟದ ಶಿಕ್ಷಣ ಸಂಸ್ಥೆಯನ್ನು (ಐಐಐಟಿ-ಬಿ) ಸ್ಥಾಪಿಸಲಾಗಿದೆ.

6) ಗ್ರಾಮೀಣ ಕ್ಷೇತ್ರದ ವಿದ್ಯಾವಂತ ಯುವಕ / ಯುವತಿಯರಿಗೆ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ತರಬೇತಿ ನೀಡಲು ಯುವ.ಕಾಂ ಯೋಜನೆಯನ್ನು ಜಾರಿಗೆ ತರಲಾಗಿದೆ.

7) ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಸ್ಥಾಪಿಸಲ್ಪಡುವ ಉದ್ದಿಮೆಗಳಿಗೆ ಹಲವಾರು ರೀತಿಯ ವಿನಾಯಿತಿ ಮತ್ತು ರಿಯಾಯಿತಿಗಳನ್ನು ನೀಡಲಾಗಿದೆ.

ಆ) ಮಾಹಿತಿ ತಂತ್ರಜ್ಞಾನದ ಉಪಯೋಗವನ್ನು ಸಾರ್ವಜನಿಕ ಆಡಳಿತ ಮತ್ತು ಆರ್ಥಿಕ ರಂಗದ ಎಲ್ಲಾ ಅಂಗಗಳಿಗೂ ವಿಸ್ತರಿಸಲು ಅವಕಾಶವಿದ್ದು ಪ್ರಮುಖವಾಗಿ ಬ್ಯಾಂಕಿಗೆ ಉದ್ದಿಮೆ, ವಿಮೆ, ವ್ಯಾಪರ ಮತ್ತು ವಾಣಿಜ್ಯ ಕ್ಷೇತ್ರಗಳಲ್ಲಿ ಹೆಚ್ಚಾಗಿ ಬಳಸಲಾಗುತ್ತಿದೆ.

ಇ) ಮಾಹಿತಿ ತಂತ್ರಜ್ಞಾನದಲ್ಲಿ ಗ್ರಾಮೀಣ ವಿದ್ಯಾವಂತ ನಿರುದ್ಯೋಗಿ ಯುವಕ-ಯುವತಿಯರಿಗೆ ತರಬೇತಿ ನೀಡುವ ಉದ್ದೇಶದಿಂದ ಯುವ. ಕಾಂ ಯೋಜನೆಯನ್ನು ಜಾರಿಗೆ ತಂದಿದ್ದು, ರಾಜ್ಯದ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಒಂದೊಂದರಂತೆ ಯುವ. ಕಾಂ ಕೇಂದ್ರಗಳನ್ನು ತೆರೆಯಲಾಗಿದೆ. ಹಾಗೆಯೇ ರಾಜ್ಯದ ರೈತರ ಉಪಯೋಗಕ್ಕಾಗಿ ಹೋಬಳಿ ಮಟ್ಟದಲ್ಲಿ ರೈತಮಿತ್ರ ಕೇಂದ್ರಗಳನ್ನು ಸಹ ಸ್ಥಾಪಿಸಲಾಗುತ್ತಿದೆ. ಪ್ರತಿ ತಾಲ್ಲೂಕಿನಲ್ಲಿ ಗಣಕೀಕೃತ ಆರ್‌ಟಿಸಿಯನ್ನು ನೀಡುವ ವ್ಯವಸ್ಥೆ ಮಾಡಲಾಗಿದೆ.

ಈ) ಮಾಹಿತಿ ತಂತ್ರಜ್ಞಾನ ಇಲಾಖೆಗೆ ವಿವಿಧ ಯೋಜನೆಗಳಡಿಯಲ್ಲಿ 2002-03ನೇ ವರ್ಷದಲ್ಲಿ ರೂ. 1567.00 ಲಕ್ಷ ಅನುದಾನ ಒದಗಿಸಲಾಗಿದೆ.

ಬೈಲಹೊಂಗಲ ಮತ ಕ್ಷೇತ್ರದಲ್ಲಿ ಸಿ.ಆರ್.ಎಫ್. ಕಾಮಗಾರಿಗಳು

2232 (2561) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೇಂದ್ರ ರಸ್ತೆ ನಿಧಿಯಲ್ಲಿ (ಸಿ.ಆರ್.ಎಫ್) ಕಳೆದ ವರ್ಷ ಹಾಗೂ ಈ ವರ್ಷ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು);

ಆ) ಬೆಳಗಾವಿ ಜಿಲ್ಲೆಯಲ್ಲಿ ಸಿ.ಆರ್. ಫಂಡ್‌ದಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ; (ಮತಕ್ಷೇತ್ರದ ಪ್ರಕಾರ ವಿವರ ನೀಡುವುದು);

ಇ) ಬೈಲಹೊಂಗಲ ಮತ ಕ್ಷೇತ್ರದಲ್ಲಿ ಕಳೆದ 4 ವರ್ಷಗಳಲ್ಲಿ ಯಾವ ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ;

ಈ) ಬೈಲಹೊಂಗಲ ಮತಕ್ಷೇತ್ರವು ವಿರೋಧ ಪಕ್ಷದ ಸದಸ್ಯರನ್ನು ವಿಧಾನ ಸಭೆಗೆ ಹೊಂದಿರುವುದರಿಂದ ಈ ಕ್ಷೇತ್ರದಲ್ಲಿ ಕಳೆದ 4 ವರ್ಷಗಳಿಂದ ಯಾವುದೇ ಕೆಲಸಗಳನ್ನು ತೆಗೆದುಕೊಂಡಿರುವುದಿಲ್ಲವೆಂಬ ಸಂಗತಿ ನಿಜವೇ;

ಉ) ಹಾಗಿದ್ದಲ್ಲಿ ಈ ತಾರತಮ್ಯವನ್ನು ಹೋಗಲಾಡಿಸಲು ಕೂಡಲೇ ಇಲ್ಲಿ ಕೆಲಸಗಳನ್ನು ತೆಗೆದುಕೊಳ್ಳಲಾಗುವುದೇ?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) ಇದುವರೆಗೆ ಕೇಂದ್ರ ಸರ್ಕಾರವು 198 ಕಾಮಗಾರಿಗಳನ್ನು ರೂ. 16408.44 ಲಕ್ಷಗಳ ಮೊತ್ತದಲ್ಲಿ ಅನುಮೋದಿಸಿದೆ. ವಿವರಗಳನ್ನು ಅನುಬಂಧ - 1ರಲ್ಲಿ ಲಗತ್ತಿಸಿದೆ.

ಆ) ಬೆಳಗಾಂ ಜಿಲ್ಲೆಯಲ್ಲಿ ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ಕೈಗೊಂಡ ಕಾಮಗಾರಿಗಳ ವಿವರವನ್ನು ಅನುಬಂಧ-2ರಲ್ಲಿ ನೀಡಿದೆ. (ಮತ ಕ್ಷೇತ್ರವಾರು ಅನುಮೋದನೆ ಮಾಡುತ್ತಿಲ್ಲ).

ಇ) ಮತ ಕ್ಷೇತ್ರವಾರು ಅನುಮೋದನೆ ಮಾಡುತ್ತಿಲ್ಲ.

ಈ) ಮಂಜೂರಾಗಿರುವ ಕೆಲಸವು ಬೈಲಹೊಂಗಲ ಮತ ಕ್ಷೇತ್ರದ ವ್ಯಾಪ್ತಿಯಲ್ಲಿರುವುದಿಲ್ಲ.

ಉ) ಬೈಲಹೊಂಗಲ-ಮರುಕುಂಬಿ ರಸ್ತೆಯನ್ನು ಕೇಂದ್ರ ರಸ್ತೆ ನಿಧಿ ಅಡಿಯಲ್ಲಿ ಅಭಿವೃದ್ಧಿ ಪಡಿಸಲು ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.